**CENTRAL BOARD OF SECONDARY EDUCATION**

**SUBJECT CODE: 015**

**CLASS -X KANNADA**

**Model Question Paper**

**TERM – II**

**Max. Marks-40** **Time-2 Hours**

- Paper will be of three Section - A, B and section C will have 100% weightage i.e 40 marks
- The pattern of Question paper will have case based/situation based/assertive/Reasoning type.
- Section- A will have Unseen passage(4 Marks)
- Section—B will have Grammar, Essay, Letter/Report/Application writing. (16 Marks)
- Section-C will have Question answers from Prose, poetry and patyapuraka adhyayana. (20 Marks)

## Section – A

### ವಾಚನ ಮತ್ತು ಗ್ರಹಿಕಾ ಕೌಶಲ್ಯ - 4 ಅಂಕಗಳು

**I ಈ ಕೆಳಗಿನ ಗದ್ಯಾಂಶವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಕೆಳದಿಯ ನಾಯಕರಲ್ಲಿ ಅತ್ಯಂತ ಪ್ರಸಿದ್ಧನಾದ ಶಿವಪ್ಪನಾಯಕನ ಕಾಲದಲ್ಲಿ ಕೆಳದಿ ರಾಜ್ಯ ವಿಸ್ತಾರವಾಯಿತು. ಮೈಸೂರು ಸಂಸ್ಥಾನದ ಹಾಸನ ಮತ್ತು ಚಿಕ್ಕಮಗಳೂರಿನ ಪ್ರದೇಶ, ಕಾಸರಗೋಡು ಇತ್ಯಾದಿ ಪ್ರದೇಶಗಳನ್ನು ಗೆದ್ದು 'ಶಿಸ್ತು' ಎಂಬ ಹೆಸರಿನಲ್ಲಿ ಭೂಕಂದಾಯವನ್ನು ಜಾರಿಗೆ ತಂದ ಶಿವಪ್ಪನಾಯಕನು ಪೋರ್ಚುಗೀಸರ ಪ್ರಾಬಲ್ಯವನ್ನು ಮೊಟಕು ಮಾಡಿ, ಅರಬ್ಬೀ ಸಮುದ್ರದ ಒಂದು ದ್ವೀಪವನ್ನು ವಶಪಡಿಸಿಕೊಂಡು 'ಪಡುಗಡಲ ಒಡೆಯ' ಎಂಬ ಬಿರುದನ್ನೂ ಪಡೆದಿದ್ದ. ಕೆಳದಿ ಸಂಸ್ಥಾನಕ್ಕೆ ಕೀರ್ತಿ ಮತ್ತು ಪ್ರತಿಷ್ಠೆಗಳನ್ನು ತಂದುಕೊಟ್ಟ ಶಿವಪ್ಪನಾಯಕನ ನಂತರ ಆಳಿದ ಕೆಲವು ದುರ್ಬಲನಾಯಕರ ಕಾಲದಲ್ಲಿ ಕೆಳದಿಯ ಉತ್ತರ ಭಾಗಗಳು ಮೊದಲಿಗೆ ಬಿಜಾಪುರದ ಆದಿಲ್ ಷಾಹಿಗಳ ಮತ್ತು ಆನಂತರ ಮರಾಠರ ವಶವಾದವು. ಮತ್ತೆ ಕೆಳದಿಯ ಸಂಸ್ಥಾನದಲ್ಲಿ ಸಮರ್ಥ ಆಳ್ವಿಕೆ ದೊರೆತದ್ದು ಸೋಮಶೇಖರನ ರಾಣಿ ಚೆನ್ನಮ್ಮಾಜಿಯ ಕಾಲದಲ್ಲಿ. ರಾಜ್ಯ ವಿಸ್ತರಣೆಯನ್ನೂ ಮಾಡಿದ ಚೆನ್ನಮ್ಮಾಜಿಯು ಔರಂಗಜೇಬನಿಗೆ ಹೆದರಿ ಓಡಿಬಂದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದ್ದಳು, ಚೆನ್ನಮ್ಮಾಜಿಯ ದತ್ತುಮಗ ಹಿರಿಯ ಬಸವಪ್ಪನಾಯಕನು ರಾಜ್ಯವನ್ನು ರಕ್ಷಿಸಿ, ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿದ. ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ಬಸವಪ್ಪನಾಯಕನು ಚಿತ್ರದುರ್ಗದ ಪಾಳೆಯಗಾರರು ಮತ್ತು ಆರ್ಕಾಟಿನ ನವಾಬನೊಡನೆ ಯುದ್ಧ ಮಾಡಿ ಗೆಲುವು ಪಡೆದ. ಕ್ರಿ.ಶ. 1757 ರಲ್ಲಿ ಅಧಿಕಾರ ವಹಿಸಿಕೊಂಡ ಕಿರಿಯ ಬಸವಪ್ಪನಾಯಕನ ಹೆಂಡತಿ ರಾಣಿ ವೀರಮ್ಮಾಜಿಯ ಕಾಲದಲ್ಲಿ ಮರಾಠರ ಮತ್ತು ಮೈಸೂರಿನವರ ಧಾಳಿ ಹೆಚ್ಚಿತು. ಕ್ರಿ.ಶ. 1763 ರಲ್ಲಿ ಹೈದರಾಲಿಯು ಕೆಳದಿಯನ್ನು ವಶಪಡಿಸಿಕೊಂಡ ನಂತರ. ಕೆಳದಿಯ ಉತ್ತರ ಭಾಗಗಳು ಮರಾಠರ ವಶದಲ್ಲೂ.ದಕ್ಷಿಣ ಭಾಗಗಳು ಮೈಸೂರಿನವರ ವಶದಲ್ಲೂ ಉಳಿದವು.

**ಪ್ರಶ್ನೆಗಳು**

1. ಶಿವಪ್ಪನಾಯಕನ ಕಾರ್ಯಸಾಧನೆಗಳೇನು? **2**
2. ಚೆನ್ನಮ್ಮಾಜಿಯು ಯಾರಿಗೆ ಆಶ್ರಯ ನೀಡಿದಳು? ಏಕೆ? **2**

## Section – B

### ಅನ್ವಯಿಕ ವ್ಯಾಕರಣ - 4 ಅಂಕಗಳು

**II. ಈ ಕೆಳಗಿನ ಸೂಚನೆಯಂತೆ ಬರೆಯಿರಿ.**

**3**. ಗಾದೆಯ ಮಾತನ್ನು ವಿಸ್ತರಿಸಿ ಬರೆಯಿರಿ. **2**

"ಬೆಳೆಯುವ ಸಿರಿ ಮೊಳಕೆಯಲಿ"

**ಅಥವಾ**

"ಮಾಡಿದುಣ್ಣೊ ಮಾರಾಯ".

**4.** ಈ ಕೆಳಗಿನ ವಾಕ್ಯದಲ್ಲಿರುವ ಎರಡು ವಿಧ್ಯರ್ಥಕ ಮತ್ತು ಎರಡು ನಿಷೇಧಾರ್ಥಕ ಪದಗಳನ್ನು ಗುರುತಿಸಿ ಬರೆಯಿರಿ. **2**

ಜನರು ದ್ವೇಷಾಸೂಯೆಯಿಂದ ಆಯುಧಗಳನ್ನು ಹಿಡಿದು ಒಬ್ಬರನ್ನೊಬ್ಬರು ಪರಸ್ಪರ ಹೊಡೆದಾಡಲು ಪ್ರಾರಂಭಿಸಿದಾಗ ರಕ್ತದ ಹೊಳೆಯೇ ಹರಿಯಿತು. ಸಾಧುವೊಬ್ಬನು ಶಾಂತಿ, ನೆಮ್ಮದಿ ಎಲ್ಲೆಡೆ ಹರಡಲಿ ದೇವರು ಜಗತ್ತಿಗೆ ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸಿದನು. ಹುಟ್ಟು ಗುಣ ಸುಟ್ಟರೂ ಹೋಗದು ಎಂಬಂತೆ ದುರ್ಬುದ್ಧಿಯನ್ನು ಬಿಡದ ಜನರು ಹಿಂಸೆಯ ದಾರಿಯಲ್ಲೇ ನಡೆದರು.

### III ಬರವಣಿಗೆ ಕೌಶಲ - 12 ಅಂಕಗಳು

**5.** ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಪ್ರಬಂಧ ಬರೆಯಿರಿ. **4**

1. ಅರಣ್ಯ ಸಂರಕ್ಷಣೆ
2. ನೀವು ರಾಷ್ಟ್ರದ ಪ್ರಧಾನಮಂತ್ರಿಯಾದರೆ
3. ಕರ್ನಾಟಕದ ದೇವಾಲಯಗಳಲ್ಲಿ ಶಿಲ್ಪಕಲೆ

**6**. ದೂರದೂರಿನಲ್ಲಿರುವ ನಿಮ್ಮ ತಂದೆಯವರಿಗೆ ನೀವು ಓದಿದ ಒಂದು ಉತ್ತಮ ಪುಸ್ತಕವನ್ನು ಕುರಿತು ಪತ್ರ ಬರೆಯಿರಿ. **4**

**ಅಥವಾ**

ದಿನಾಂಕ 19/09/2021 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಉಡುಪಿಯ ವಿದ್ಯಾಪೀಠ ಶಾಲೆಯಲ್ಲಿ ಖಾಲಿಯಿರುವ ಕನ್ನಡ ಶಿಕ್ಷಕರ ಹುದ್ದೆಗೆ ಅಲ್ಲಿನ ಕಾರ್ಯದರ್ಶಿಗಳಿಗೆ ನಿಮ್ಮ ಸ್ವ-ವಿವರಗಳೊಂದಿಗೆ ಅರ್ಜಿಸಲ್ಲಿಸಿ.

**7**. ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಅನುಭವಿಸುತ್ತಿರುವ ತೊಂದರೆಗಳನ್ನು ಕುರಿತು ಒಂದು ವರದಿ ಸಿದ್ಧಪಡಿಸಿ. **4**

## Section – C

### ಪಠ್ಯಗಳ ಅಧ್ಯಯನ - 20 ಅಂಕಗಳು

**IV ಈ ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2X3= 6**

8. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?

9. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

10. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

**V. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ.** **3X2 = 6**

11. ''ಈತನ ಮಾತು ಅಶ್ರುತಪೂರ್ವಮ್''

**ಅಥವಾ**

''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"

12. ''ಹಸುರಾದುದು ಕವಿಯಾತ್ಮಂ"

**ಅಥವಾ**

''ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.** **2X 2=4**

13. ಭಗತ್ ಸಿಂಗ್‌ನ ಸಹಚರರು ಯಾರು?

14. ಮೃಗದ ಬಾಹ್ಯ ಆಕಾರ ಹೇಗಿತ್ತು?

**VII. ಈ ಕೆಳಗಿನ ಪ್ರಶ್ನೆಗೆ ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4X1 =4**

15. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

''ಸತ್ಯಕ್ಕೆ ಸಾವಿಲ್ಲ ಎಂಬ ಮಾತು 'ವೃಕ್ಷಸಾಕ್ಷಿ' ಪಾಠದಲ್ಲಿ ಯಾರ ಪಾತ್ರದ ಮೂಲಕ ಹೇಗೆ ವಿವರಿಸಲಾಗಿದೆ.

**********************************************************************